ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ಸೋಮವಾರ, ದಿನಾಂಕ: 02ನೇ ಮಾರ್ಚ್, 2020

ವಿದ್ಯಾರ್ಥಿಗಳಿಗೆ ಒದಗಿಸಲಾದ ಲ್ಯಾಪ್‌ಟಾಪ್ ದರಗಳ ಬಗ್ಗೆ

ಶ್ರೀ ಹೆಚ್.ಎಂ. ರೇವಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :-

50 (113) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 2016-17 ಮತ್ತು 2017-18 ನೇ ಸಾಲಿನಲ್ಲಿ ಕಾಲೇಜಿನ ಪ್ರಥಮ ವರ್ಷದ ಬಿ.ಎ., ಬಿ.ಕಾಂ., ಬಿ.ಎಸ್‌ಸಿ., ಸಾಮಾನ್ಯ ವರ್ಗಗಳು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಯಾವ ಕಂಪನಿಯ ಯಾವ ಯಾವ ಲ್ಯಾಪ್‌ಟಾಪ್‌ಗಳನ್ನು ನೀಡಲಾಗಿತ್ತು ; (ಕಾನ್‌ಫಿಗೇರೆಷನ್ ವಿವರ ನೀಡುವುದು)

(ಆ) ಪ್ರತಿ ಲ್ಯಾಪ್‌ಟಾಪ್‌ನ್ನು ಯಾವ ದರದಲ್ಲಿ ಪಡೆಯಲಾಗಿದೆ ಹಾಗೂ ಇದನ್ನು ಟೆಂಡರ್ ಮುಖಾಂತರ ಪಡೆಯಲಾಗಿತ್ತೇ ; ಟೆಂಡರ್ ಮುಖಾಂತರ ಪಡೆದಿದ್ದಲ್ಲಿ ಟೆಂಡರ್‌ದಾರರ ಮಾಹಿತಿ, ಟೆಂಡರ್ ಮೊತ್ತದ ವಿವರಗಳನ್ನು ನೀಡುವುದು ;

(ಇ) 2018-19 ಹಾಗೂ 2019-20ನೇ ಸಾಲಿನಲ್ಲಿ ಪ್ರತಿ ಲ್ಯಾಪ್‌ಟಾಪ್‌ನ್ನು ಯಾವ ದರದಲ್ಲಿ ಪಡೆಯಲಾಗಿದೆ ಹಾಗೂ ಇದನ್ನು ಟೆಂಡರ್ ಮುಖಾಂತರ ಪಡೆಯಲಾಗಿತ್ತೇ ; ಟೆಂಡರ್ ಮುಖಾಂತರ ಪಡೆದಿದ್ದಲ್ಲಿ ಟೆಂಡರ್‌ದಾರರ ಮಾಹಿತಿ, ಟೆಂಡರ್ ಮೊತ್ತದ ವಿವರಗಳನ್ನು ನೀಡುವುದು ;

(ಈ) 2016-17 ಹಾಗೂ 2019-20ನೇ ಸಾಲಿನಲ್ಲಿ ಯಾವ ಯಾವ ದರದಲ್ಲಿ ಲ್ಯಾಪ್‌ಟಾಪ್ ಖರೀದಿಸಲಾಗಿತ್ತು ಮತ್ತು ಈ ವರ್ಷ ಖರೀದಿ ಮಾಡಿದ ಪ್ರತಿ ಲ್ಯಾಪ್‌ಟಾಪ್ ದರ ಎಷ್ಟು ; ಎರಡು ಬೇರೆ ಬೇರೆ ದರ ಇದ್ದಲ್ಲಿ ಯಾವ ಕಾರಣಕ್ಕಾಗಿ ವ್ಯತ್ಯಾಸವಿದೆ ಎಂಬುದಕ್ಕೆ ಸಂಪೂರ್ಣ ಮಾಹಿತಿಯನ್ನು ನೀಡುವುದು ?